**ಕರ್ನಾಟಕ ಸರ್ಕಾರ**

**ರಾಷ್ಟ್ರೀಯ ಸೇವಾ ಯೋಜನೆ**

ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.

ಸಂಖ್ಯೆ:ಪಪೂಶಿಇ/ರಾಸೇಯೋ/19/2017-18 ದಿನಾಂಕ: 27.07.2017

**ಜ್ಞಾಪನಾ**

ವಿಷಯ: ದಿನಾಂಕ 29 ಮತು 30.07.2017 ರಂದು ನಡೆಯಲಿರುವ ರಾಜ್ಯ ಮಟ್ಟದ 2 ದಿನಗಳ ವಿಚಾರ ಕಾರ್ಯಾಗಾರದಲ್ಲಿ ಯೋಜನಾಧಿಕಾರಿಗಳು ಭಾಗವಹಿಸುವ ಬಗ್ಗೆ.

ಉಲ್ಲೇಖ: ಗಾಂಧೀ ಭವನ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ), ಕುಮಾರ ಪಾರ್ಕ್ ಪೂರ್ವ, ಬೆಂಗಳೂರು ಇವರ ಪತ್ರ ದಿನಾಂಕ 04.07.2017.

* * * *

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ: 29.07.2017 ಮತು 30.07.2017 ರಂದು 2 ದಿನಗಳ **"ಗಾಂಧೀ ಮತ್ತು ಸಮಾಜವಾದ"** ಎಂಬ ಕಾರ್ಯಾಗಾರವು **ಅರಸೀಕೆರೆಯ ಕಸ್ತೂರಬಾ ಗಾಂಧೀ ಆಶ್ರಮದಲ್ಲಿ ನಡೆಯಲಿದೆ.** ಕಾಲೇಜು ಅಧ್ಯಾಪಕರಿಗಾಗಿ ಈ ಕಾರ್ಯಾಗಾರವನ್ನು ಯೋಜಿಸಲಾಗಿದೆ. ಸದರಿ ಕಾರ್ಯಾಗಾರವು ಅಧ್ಯಾಪಕರ ಕ್ಯಾರಿಯರ್ ಅಡ್ವಾನ್ಸ್ ಪ್ರಕ್ರಿಯೆಗೂ ಪ್ರಯೋಜನವಾಗಲಿದೆ.

ವಿಶೇಷವಾಗಿ ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿಗಳಿಗೆ ಈ ಶಿಬಿರದಲ್ಲಿ ಆದ್ಯತೆ ನೀಡಲಾಗಿದೆ. ಕಾರ್ಯಗಾರದಲ್ಲಿ ಭಾಗವಹಿಸುವ ಅಧ್ಯಾಪಕರಿಗೆ ಮತ್ತು ಯೋಜನಾಧಿಕಾರಿಗಳಿಗೆ ಪ್ರಯಾಣ ವೆಚ್ಚ ಮತ್ತು ಊಟ ವಸತಿ ಸೌಲಭ್ಯಗಳನ್ನು ಒದಗಿಸಲಾಗುವುದು.

ಸದರಿ ಕಾರ್ಯಾಗಾರದಲ್ಲಿ ಖ್ಯಾತ ಲೇಖಕರಾದ ಶ್ರೀ ಡಿ.ಎಸ್.ನಾಗಭೂಷಣ್ ಶಿಬಿರ ನಿರ್ದೇಶಕರಾಗಿರುತ್ತಾರೆ, ಪ್ರೊ. ಬಿ.ಜಿ.ಶಿವರಾಜು, ಉಪಾಧ್ಯಕ್ಷರು, ಗಾಂಧೀ ಸ್ಮಾರಕ ನಿಧಿ ಬೆಂಗಳೂರು ಇವರು ಸಂಚಾಲಕರಾಗಿರುತ್ತಾರೆ. ವಿದ್ವಾಂಸರಾದ ಡಾ ಮೀನಾ ದೇಶಪಾಂಡೆ, ಡಾ. ರಾಜಾರಾಂ ತೋಳ್ಪಾಡಿ. ಡಾ. ರಾಜೇಂದ್ರ ಚೆನ್ನಿ, ಶ್ರೀ ಲಕ್ಷೀಶ ತೋಳ್ಪಾಡಿ, ಶ್ರೀ ಕಡಿದಾಳು ಶಾಮಣ್ಣ, ಡಾ.ನಿತ್ಯಾನಂದ ಶೆಟ್ಟಿ ಮೊದಲಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ. ಶಿಬಿರ ನಡೆಯುವ ಸ್ಥಳವಾದ ಕಸ್ತೂರ ಬಾ ಗಾಂಧಿ ಆಶ್ರಮವು ಅರಸೀಕೆರೆ–ಮೈಸೂರು ರಸ್ತೆಯಲ್ಲಿ ಅರಸೀಕೆರೆ ಪಟ್ಟಣದಿಂದ ಸುಮಾರು 3 ಕಿ.ಮಿ., ದೂರದಲ್ಲಿದೆ

ಈ ಕಾರ್ಯಕ್ರಮಕ್ಕೆ ಈ ಕೆಳಕಂಡ ಎನ್.ಎಸ್.ಎಸ್. ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಸಂಬಂಧಪಟ್ಟ ಪ್ರಾಂಶುಪಾಲರು ಈ ಕೂಡಲೆ ಎನ್.ಎಸ್.ಎಸ್. ಅಧಿಕಾರಿಗಳನ್ನು ಬಿಡುಗಡೆ ಮಾಡಲು ತಿಳಿಸಲಾಗಿದೆ.

| SL. No | Code No | College Name | Programme officer | Programme officer Phone No. |
|---|---|---|---|---|
| 1. | HH054 | Govt PU College Birur Kadur Tq Chickamagalur | Pradeep B.V. | 9448530246 |
| 2. | GG064 | SPSR Rural PU College Rampur Chitradurga | Dr. Thimmayya M.S | 9538070599 |

ಎನ್.ಎಸ್.ಎಸ್. ರಾಜ್ಯ ಸಂಯೋಜನಾಧಿಕಾರಿಗಳು,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಬೆಂಗಳೂರು.

ಪ್ರತಿಗಳು:

1. ಶ್ರೀ ವೂಡೆ ಪಿ ಕೃಷ್ಣ ಅಧ್ಯಕ್ಷರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಶ್ರೀ ಇ.ಬಸವರಾಜು, ಕಾರ್ಯದರ್ಶಿಗಳು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ಕಛೇರಿ ಪ್ರತಿ.